ಕೊಡ್ತಾ ಇದ್ದೀರಿ. ಅದಕ್ಕೆ ಇಂಟರೆಸ್ಟ್‌ಫ್ರೀ ಲೋನ್ ಕೊಡಲಿಕ್ಕೆ ಏನಾದರೂ ಅವಕಾಶ ಇದೆಯೇ ಅಂತ ಅನ್ನುವುದನ್ನು ನಮ್ಮ ಸರ್ಕಾರ ಪರಿಶೀಲನೆ ಮಾಡಬೇಕು.

ಉಪಸಭಾಪತಿಗಳು :- ಪ್ರತ್ಯೇಕ ಚರ್ಚೆಗೆ ಬರುತ್ತದೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :- ಗ್ರಾಮಾಂತರ ಪ್ರದೇಶದ ಕೈಗಾರಿಕೆ ಇತ್ಯಾದಿ ವಿಚಾರಗಳು ಬಂದಾಗ ಈ ಅಧಿವೇಶನದಲ್ಲೇ ಚರ್ಚೆಗೆ ಅದನ್ನೆಲ್ಲ ಒಟ್ಟಿಗೆ ತೆಗೆದುಕೊಳ್ಳೋಣ. ಎಷ್ಟು ಶೀಘ್ರವಾಗಿ ಅದನ್ನು ಚರ್ಚೆಗೆ ತಗೊಳಬೇಕೋ ಅಷ್ಟು ಬೇಗ ತರಲು ಅಧ್ಯಕ್ಷರಿಗೆ ನಾವೆಲ್ಲ ಸೇರಿ ವಿನಂತಿ ಮಾಡೋಣ.

ಅವಶ್ಯ ವಸ್ತುಗಳ ಬೇಡಿಕೆಯ ಪ್ರಮಾಣ

130 (658). ಶ್ರೀ ರಾಜುಗೌಡ (ಹನೂರು):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಸೀಮೆಎಣ್ಣೆ, ಅಕ್ಕಿ, ಗೋಧಿ, ಪಾಮ್ ಆಯಿಲ್, ಸಕ್ಕರೆ ಇವುಗಳ ಬೇಡಿಕೆ ಎಷ್ಟಿದೆ?

ಆ) ಈ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಅವಶ್ಯಕವಿರುವ ಪಡಿತರ ವಸ್ತುಗಳ ಪ್ರಮಾಣ ಈ ಕೆಳಕಂಡಂತಿದೆ.

ಸೀಮೆಎಣ್ಣೆ	:	67,000 ಕಿ.ಲೀ.
ಅಕ್ಕಿ	:	75,000 ಮೆ.ಟನ್
ಗೋಧಿ	:	50,000 ಮೆ.ಟನ್
ಪಾಮ್ ಆಯಿಲ್	:	11,000 ಮೆ.ಟನ್
ಸಕ್ಕರೆ	:	29,000 ಮೆ.ಟನ್

ಆ) ರಾಜ್ಯದ ಈಗಿನ ಬೇಡಿಕೆಯನ್ನು ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒತ್ತಾಯ ಮಾಡಿದೆ.

ಶ್ರೀ ಜಿ. ರಾಜೂಗೌಡ:- ತಾವು ರಾಜ್ಯಕ್ಕೆ ಎಷ್ಟು ಪ್ರಮಾಣದ ಸೀಮೆಎಣ್ಣೆ, ಅಕ್ಕಿ ಬೇಕು ಎಂದು ನಿಗದಿ ಮಾಡಿಕೊಟ್ಟಿದ್ದೀರಿ. ಈಗ ಸರಬರಾಜು ಆಗುತ್ತಾ ಇರುವ ಪ್ರಮಾಣ ಎಷ್ಟು? ಕೊರತೆ ಇರುವ ಪ್ರಮಾಣ ಎಷ್ಟು? ಈ ಕೊರತೆಯ ಪ್ರಮಾಣವನ್ನು ತಾವು ಯಾವ ದಿಕ್ಕಿನಲ್ಲಿ ಹೇಳಬೇಕು ಎಂದರೆ, ಈಗ ತಾವು ಆದಾಯ ಮಿತಿಯನ್ನು 6,600 ಕ್ಕೆ ಏರಿಸಿದ್ದೀರಿ. ಆ ಮಿತಿಯಲ್ಲಿ ಈ ಹಸಿರು ಕಾರ್ಡು ಪಡೆಯಲಿಕ್ಕೆ ಈಗ ಅನೇಕ ತರಹ ಜನ ಅರ್ಹರಾಗಿ ಬರುತ್ತಾರೆ. ಆ ದೃಷ್ಟಿಯನ್ನು ಇಟ್ಟುಕೊಂಡು ತಾವು ಕೊರತೆಯನ್ನು ಹೇಳಬೇಕು. ತಮ್ಮ ಆದಾಯ 6,600 ಮಿತಿಯಲ್ಲಿ ಇನ್ನೂ ಅನೇಕ ಜನ ಅರ್ಹರು ಬರುತ್ತಾರೆ, ಆ ದೃಷ್ಟಿಯನ್ನು ಇಟ್ಟುಕೊಂಡು ಕೊರತೆ ಪ್ರಮಾಣವನ್ನು ತಾವು ಹೇಳಬೇಕು. ಈ ಕೊರತೆಯನ್ನು ಪೂರೈಸುವುದಕ್ಕೆ ಕೇಂದ್ರ ಸರ್ಕಾರದ ಮತ್ತು ತಮ್ಮ ಒಂದು ವ್ಯವಸ್ಥೆ ಏನು ಇದೆ ಎಂದು ಹೇಳಬೇಕು. ಕೊರತೆಯ ಪ್ರಮಾಣ ಎಷ್ಟು ಎಂಬುದನ್ನು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವಾಗಿ, ನೇರವಾಗಿ ನಮ್ಮ ರಾಜ್ಯದ ಬೇಡಿಕೆ ಎಷ್ಟು ಇದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ನಮ್ಮ ಬೇಡಿಕೆಗೆ ತಕ್ಕಂತೆ ಕೇಂದ್ರ ಸರ್ಕಾರದವರು ಅಕ್ಕಿ ಮತ್ತಿತರ ವಸ್ತುಗಳನ್ನು ಕೊಡುತ್ತಿಲ್ಲ. ಇವತ್ತು ನಮಗೆ ಬರುತ್ತಿರತಕ್ಕಾಂಥದ್ದು 67,000 ಕಿ.ಲೀ. ಸೀಮೆಎಣ್ಣೆಗೆ ಸುಮಾರು 55.866 ಕಿ.ಲೀ, 75,000 ಮೆಟ್ರಿಕ್ ಟನ್ ಅಕ್ಕಿಗೆ ನಮಗೆ ಬರುತ್ತಿರತಕ್ಕಾಂಥದ್ದು 48,000 ಮೆಟ್ರಿಕ್ ಟನ್. ಹಾಗೆಯೇ ಗೋಧಿ 50,000 ಮೆಟ್ರಿಕ್ ಟನ್ ನಮ್ಮ ಬೇಡಿಕೆಗೆ ಕೇಂದ್ರ ಸರ್ಕಾರದವರು 40,000 ಮೆಟ್ರಿಕ್ ಟನ್ ಕೊಡುತ್ತಿದ್ದಾರೆ. ತಾಳೆ ಎಣ್ಣೆ ಮಾತ್ರ ನಮಗೆ ಪಿರಿಯಾಡಿಕಲ್ ಆಗಿ ಕಂಟಿನ್ಯೂಯಸ್ ಆಗಿ ಬರುತ್ತಾ ಇಲ್ಲ. ಅದು ನಮಗೆ ಕನಿಷ್ಟ ಪ್ರಮಾಣದಲ್ಲಿ ಬರುತ್ತಿದೆ. ಅದಕ್ಕೆ ನಮ್ಮ ಬೇಡಿಕೆ 11,000 ಮೆಟ್ರಿಕ್ ಟನ್ ಇದ್ದರೆ ಹಾಲಿ 1,200 ಮೆಟ್ರಿಕ್ ಟನ್ ಮಾತ್ರ ಕೊಡುತ್ತಿದ್ದಾರೆ. ಕಾರ್ಡುದಾರರ ಸಂಖ್ಯೆ 80 ಲಕ್ಷ ಇದ್ದಾರೆ. ಅವರಿಗೆ ಎಲ್ಲರಿಗೂ ಒಂದೊಂದು ಕೆ.ಜಿ. ಕೊಡಬೇಕಾದರೆ ಸುಮಾರು ನಮಗೆ 11,000 ಮೆಟ್ರಿಕ್ ಟನ್ ಬೇಕು. ಆದರೆ ಎಣ್ಣೆ ಪ್ರಮಾಣ ನಮಗೆ ಬಹಳ ಕನಿಷ್ಟ, ಪ್ರಮಾಣದಲ್ಲಿ ಬರುತ್ತಿರುವುದರಿಂದ ಎಲ್ಲಾ ಕಾರ್ಡುದಾರರಿಗೆ ಕೊಡುವುದಕ್ಕೆ ಆಗದೇ ನಾವು ಒಂದು ತಂತ್ರವನ್ನು ಮಾಡಿ ಪ್ರಥಮವಾಗಿ ಬಂದಂಥ ಹಸಿರು ಕಾರ್ಡುದಾರರಿಗೆ,

ರೂರಲ್ ಏರಿಯಾದವರಿಗೆ ಒಂದೊಂದು ಕೆ.ಜಿ. ಎಂದು ಕೊಟ್ಟಿದ್ದೇವೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ನಮ್ಮ ಆದಾಯ ಮಿತಿ ಏನು ಇದೆ ಹಸಿರು ಕಾರ್ಡುದಾರರಿಗೆ 3,500 ಏನಿದೆ ಇದನ್ನು, 6,000 ರೂ.ಗೆ ಮಾಡಬೇಕೆಂದು ಮಂತ್ರಿಮಂಡಲ ತೀರ್ಮಾನ ಮಾಡಿ ಹೊಸ ಸಮೀಕ್ಷೆ ಮಾಡಬೇಕು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಈಗಾಗಲೇ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಈ ತಿಂಗಳು ಮುಗಿಯುತ್ತಾ ಬರುತ್ತಿದೆ. ಬಜೆಟ್ ವರ್ಷ ಆದತಕ್ಷಣ 1992ರ ಏಪ್ರಿಲ್ ತಿಂಗಳಿನಿಂದ ಹಸಿರು ಕಾರ್ಡುಗಳನ್ನು ಹೊಸದಾಗಿ ಕೊಡಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ಖಚಿತವಾಗಿ ಮುಂದಿನ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಮಾನ್ಯ ಸದಸ್ಯರ ಆನಿಸಿಕೆ ಏನು ಇದೆ ಎಂದರೆ ಕಾರ್ಡುದಾರರಿಗೆ ಕೊಡತಕ್ಕಂಥ ಕಡಿಮೆ ಪ್ರಮಾಣದ ಆಹಾರ ವಸ್ತುಗಳನ್ನು ಜಾಸ್ತಿ ಮಾಡಬೇಕೆಂದು ಇದೆ. ಆ ಬಗ್ಗೆ ಸರ್ಕಾರಕ್ಕೆ ಕೂಡ ಕಳಕಳಿ ಇದೆ. ನಮ್ಮ ಬೇಡಿಕೆಯನ್ನು ಕುರಿತು ಕೇಂದ್ರಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಇವತ್ತು ನಮ್ಮ ಬೇಡಿಕೆ ಏನು ಇದೆ ಅದು ತಾಳೆ ಎಣ್ಣೆ ಇರಬಹುದು, ಸೀಮೆಎಣ್ಣೆ ಇರಬಹುದು, ಸಕ್ಕರೆ ಇರಬಹುದು, ಅಕ್ಕಿ, ಗೋಧಿ ಇರಬಹುದು, ಇವುಗಳನ್ನು ನಮ್ಮ ಬೇಡಿಕೆಗೆ ತಕ್ಕಂತೆ ಕೊಡಬೇಕು, ಈ ಕಾರ್ಡುಗಳು ಕೂಡ ಜಾಸ್ತಿ ಆಗುತ್ತಿದೆ ಎನ್ನುವ ಮಾತನ್ನು ಹೇಳಿ ಪ್ರಧಾನಮಂತ್ರಿಯವರ ಗಮನವನ್ನು ಸೆಳೆದಿದ್ದಾರೆ. ನಾವು ಅದರ ಬಗ್ಗೆ ಗಮನವನ್ನು ಹರಿಸಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ :- ಮಾನ್ಯ ಅಧ್ಯಕ್ಷರೇ, 3,500 ಆದಾಯ ಮಿತಿ ಇರತಕ್ಕಂಥ ಕಾರ್ಡುದಾರರಿಗೆ ಕೊಡಲಿಕ್ಕೆ ಸಾಧ್ಯವಾಗಿಲ್ಲ, ಇವರಿಗೆ ಕೊಡಲಿಕ್ಕೆ ಬೇಕಾದಷ್ಟು ಕೊರತೆ ಇದೆ. ಇನ್ನು 6,600 ಆದಾಯ ಮಿತಿಯಲ್ಲಿ ಬಹಳಷ್ಟು ಜನ ಬರುತ್ತಾರೆ, ಅದರಲ್ಲಿ ಎಷ್ಟು ಕೊರತೆ ಆಗಬಹುದು ಎಂಬುದನ್ನು ತಾವು ದಯಮಾಡಿ ತಿಳಿಸಬೇಕು. ತಾವು ಪ್ರತಿಯೊಂದಕ್ಕೂ ಕೇಂದ್ರದ ಮೊರೆ ಹೋಗದೆ ಬಹಿರಂಗ ಮಾರುಕಟ್ಟೆಯಲ್ಲಿ ಸುಗ್ಗಿ ಕಾಲದಲ್ಲಿ ಆಹಾರ ಧಾನ್ಯವನ್ನು ತೆಗೆದುಕೊಂಡು ಏಕೆ ಪಡಿತರ ವ್ಯವಸ್ಥೆಯಲ್ಲಿ ಅದನ್ನು ಮಾರಬಾರದು. ಈ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನೀಡಿರತಕ್ಕ ಸಲಹೆಯನ್ನು ಸರ್ಕಾರ ಖಂಡಿತವಾಗಿಯೂ ಸ್ವಾಗತ ಮಾಡುತ್ತದೆ. ಅದನ್ನು ಪರಿಶೀಲನೆ ಮಾಡಿ ಆ ದಿಕ್ಕಿನಲ್ಲಿ ಕೂಡ ಪ್ರಯತ್ನ ಮಾಡುತ್ತೇವೆ.

ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಅಭ್ಯರ್ಥಿಗಳ ಆಯ್ಕೆ.

124(649). ಶ್ರೀ ಆರ್.ಬಿ. ತಿಮ್ಮಾಪುರ (ಮುಧೋಳ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ದ್ವಿತೀಯ ದರ್ಜೆ ಸಹಾಯಕ ಪರೀಕ್ಷೆಗೆ 1986ರಲ್ಲಿ ಕುಳಿತು ತೇರ್ಗಡೆಯಾದ ಅಭ್ಯರ್ಥಿಗಳಿಗೆ, ಕಾಲೇಜು ಶಿಕ್ಷಣ ನಿರ್ದೇಶಕರ ಕಛೇರಿಯಲ್ಲಿ ಸೇವೆ ಸಲ್ಲಿಸಲು ಕಳಿಸಿದ 95 ಜನ ಅಭ್ಯರ್ಥಿಗಳಿಗೆ ಸೇವೆಗೆ ಅವಕಾಶ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ ಅವಕಾಶ ಎಷ್ಟು ಅಭ್ಯರ್ಥಿಗಳಿಗೆ ಸಿಕ್ಕಿದೆ?

ಇ) ಅವಕಾಶ ಸಿಗದ ಅಭ್ಯರ್ಥಿಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):-

ಅ) ಇಲ್ಲ.

ಆ) 50 ಅಭ್ಯರ್ಥಿಗಳು.

ಇ) ನೇರ ನೇಮಕಾತಿ ಹುದ್ದೆಗಳು ಲಭ್ಯವಾದಂತೆಲ್ಲಾ ಉಳಿದ ಅಭ್ಯರ್ಥಿಗಳಿಗೆ ಅವಕಾಶ ನೀಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ) :- ಸನ್ಮಾನ್ಯ ಅಧ್ಯಕ್ಷಣೆಯವರೇ, ಶಿಕ್ಷಣ ಸಚಿವರ ಪರವಾಗಿ ಉತ್ತರ ಕೊಡಲಿಕ್ಕೆ ತಮ್ಮ ಅನುಮತಿ ಬೇಡುತ್ತೇನೆ. ಈಗಾಗಲೇ ಸಂಬಂಧಪಟ್ಟ ಸದಸ್ಯರಿಗೆ ಲಿಖಿತ ಉತ್ತರಗಳನ್ನು ಕಳುಹಿಸಿಕೊಡಲಾಗಿದೆ.